## ಹೆಜ್ಜೆಗಳು

ಕಲಿ ಕಲಿಸು ಯೋಜನೆಯ ಮಹತ್ವದ ಪರಿಣಾಮಗಳನ್ನು ಪ್ರತಿಬಿಂಬಿಸುವ ಸಂಚಿಕೆ.

ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ಸಂಸ್ಥೆಯ ಕಲಿ ಕಲಿಸು ಯೋಜನೆಯ ಮಹತ್ವದ ಪರಿಣಾಮಗಳನ್ನು ಪ್ರತಿಬಿಂಬಿಸುವ ವಾರ್ಷಿಕ ಪ್ರಕಟಣೆಯಾಗಿದೆ. ಈ ಮಹತ್ವದ ಸಂಚಿಕೆಯಲ್ಲಿ ಅನುದಾನಿತ ಶಿಕ್ಷಕರ ಮತ್ತು ಕಲಾವಿದರ ಯೋಜನೆಗಳ ಕುರಿತು ಲೇಖನಗಳನ್ನು ಕಾಣಬಹುದು. ಕರ್ನಾಟಕದಲ್ಲಿ ಕಲಾ ಶಿಕ್ಷಣದ ಬಗ್ಗೆ ಅಧ್ಯಯನ ಮಾಡುವ ಶಿಕ್ಷಕರಿಗೆ ನೀತಿ ನಿರೂಪಕರಿಗೆ ಸಂಸ್ಥೆಗಳಿಗೆ ಈ ಕೈಪಿಡಿ ಒಂದು ಸಂಪನ್ಮೂಲ ಕೃತಿ ಯಾಗಿದೆ. ಹೆಜ್ಜೆಗಳು ಪುಸ್ತಕವನ್ನು ಓದಿ ಕಲಿ ಕಲಿಸು ಯೋಜನೆಯ ಮಹತ್ವವನ್ನು ಚಿತ್ರಗಳೊಂದಿಗೆ ತಿಳಿಯಿರಿ.

೨೦೧೬-೧೭ರಲ್ಲಿ ಹೆಜ್ಜೆಗಳು ಪ್ರಥಮ ಸಂಚಿಕೆ ಐ ಎಫ್ ಎ ಅನುದಾನಿತ ಶಿಕ್ಷಕರಾದ ಎಸ್. ಕಲಾಧರ ಮತ್ತು ಸದಾನಂದ ಬೈಂದೂರು ಅವರ ಸಂಪಾದಕತ್ವದಲ್ಲಿ ಪ್ರಕಟಣೆಯಾಯಿತು. ಇದರ ವಿನ್ಯಾಸವನ್ನು ಎಸ್. ಕಲಾಧರ ಮಾಡಿದರು.

ಕಲಿ ಕಲಿಸು ಹೆಜ್ಜೆಗಳು ಎರಡನೇ ಸಂಚಿಕೆಯು ೨೦೧೭-೧೮ ಸಾಲಿನಲ್ಲಿ ಐ ಎಫ್ ಎ ಅನುದಾನಿತ ಶಿಕ್ಷಕರಾದ ನಾಗರಾಜ  ಹುಡೇದ ಮತ್ತು ಚಿತ್ರ ವಿ. ರವರ ಸಂಪಾದಕತ್ವದಲ್ಲಿ ಮತ್ತು ಎಸ್. ಕಲಾಧರ ರವರ ವಿನ್ಯಾಸದಲ್ಲಿ ಮೂಡಿಬಂದಿತು.

ಮೊದಲನೇ ಸಂಚಿಕೆಯು ಸಿಟಿ ಇಂಡಿಯಾ ರವರ ಬೆಂಬಲದೊಂದಿಗೆ ಹಾಗೂ ಎರಡನೇ ಸಂಚಿಕೆಯು ಸಿಂಘಾಲ್ ಅಯ್ಯರ್ ಫ್ಯಾಮಿಲಿ ಫೌಂಡೇಶನ್ ವತಿಯಿಂದ ಪ್ರಕಟವಾಯಿತು.

'ಹೆಜ್ಜೆಗಳು' ಮೂರನೇ ಸಂಚಿಕೆಯನ್ನು ಶಿಕ್ಷಕರುಗಳಾದ ಕೊಟ್ರೇಶ್ ಬಿ , ಮತ್ತು ನಿಂಗು ಸೊಲಗಿಯವರ ಸಹ ಸಂಪಾದಕತ್ವದಲ್ಲಿ ಹೊರತರಲಾಗಿದೆ. ನಿಂಗು ಸೊಲಗಿಯವರು ಇದರ ವಿನ್ಯಾಸಕಾರರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಮೊದಲ ಸಂಚಿಕೆಯ ಪ್ರಕಟಣೆಗೆ ಸಿಟಿ ಇಂಡಿಯಾ ಸಂಸ್ಥೆಯವರು ಅನುದಾನವನ್ನು ನೀಡಿದ್ದರೆ, ಮಿಕ್ಕ ಎರಡು ಸಂಚಿಕೆಗಳನ್ನು ಸಿಂಘಾಲ್ ಐಯ್ಯರ್ ಫ್ಯಾಮಿಲಿ ಫೌಂಡೇಶನ್ ನೀಡಿರುವ ಅನುದಾದದಿಂದ ಪ್ರಕಟಿಸಲಾಗಿದೆ.